*ಸಿಗದೆ ತೊಂದರೆಯಾಗುತ್ತಿದ್ದು ಕಷ್ಟ ನಷ್ಟಗೊಳಗಾಗಿರುವ ರೈತರ ಹಿತ ಕಾಪಾಡಲು ಆಣೆಕಟ್ಟುಗಳ ದುರಸ್ತಿ ಮಾಡಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿರುತ್ತದೆ?*

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಬಂದಿದೆ.

ಆ) ಕಾಪು ಕ್ಷೇತ್ರದ ಕುರ್ಕಾಲು ಆಣೆಕಟ್ಟು ಮತ್ತು ಫಲಿಮಾರು ಆಣೆಕಟ್ಟುಗಳು ನಾದುರಸ್ತಿಯಲ್ಲಿದ್ದು, ಇವುಗಳನ್ನು ಸುಸ್ಥಿತಿಗೆ ತರಲು ಸುಮಾರು 20 ಲಕ್ಷಗಳು ಬೇಕಾಗುತ್ತದೆ.

1996-97ನೇ ಸಾಲಿನಲ್ಲಿ ಯೋಜನೇತರ ಶೀರ್ಷಿಕೆಯಡಿಯಲ್ಲಿ ಅನುದಾನದ ಕೊರತೆ ಇದ್ದು ತೆಗೆದುಕೊಂಡಿರುವುದಿಲ್ಲ. ಈ ಕಾಮಗಾರಿಗಳನ್ನು 1997-98ನೇ ಸಾಲಿನ ಆಯವ್ಯಯ 4702 ಲೆಕ್ಕ ಶೀರ್ಷಿಕೆಯಡಿಯಲ್ಲಿ ಸೇರಿಸಲು ಯೋಚಿಸಲಾಗಿದೆ.

## ವಿದ್ಯುತ್ ಕೊರತೆಯ ನಿವಾರಣೆ ಕುರಿತು

636 - ಶ್ರೀ ಎಸ್.ಚಂದ್ರಶೇಖರ್ ನಾಯಕ್ (ಗೋಕಾಕ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ ಉತ್ಪತ್ತಿಯಾಗುತ್ತಿರುವ ವಿದ್ಯುತ್ ಪ್ರಮಾಣವೆಷ್ಟು?*

*ಆ) ನಮ್ಮ ರಾಜ್ಯಕ್ಕೆ ಈಗ ಬೇಕಾಗುವ ವಿದ್ಯುತ್ ಪ್ರಮಾಣವೆಷ್ಟು?*

*ಇ) ಕೊರತೆ ನಿವಾರಣೆಗಾಗಿ ಹೊಸದಾಗಿ ಸ್ಥಾಪಿಸಲಾದ ವಿದ್ಯುತ್ ಸ್ಥಾವರಗಳು ಯಾವುವು (ವಿವರಣೆ ನೀಡುವುದು)*

*ಈ) ಮಹಾರಾಷ್ಟ್ರದಿಂದ ಪಡೆಯುತ್ತಿರುವ ವಿದ್ಯುತ್ ಪ್ರಮಾಣವೇನು? ಅದಕ್ಕೆ ಕೊಡುತ್ತಿರುವ ಹಣವೆಷ್ಟು?*

*ಉ) ವಿದ್ಯುತ್‌ನ ಕೊರತೆಯನ್ನು ನಿವಾರಿಸಲು ಬೇಕಾಗಿರುವ ಅವಧಿ ಎಷ್ಟು?*

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಹಾಗೂ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವುಗಳ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಪ್ರಸ್ತುತ ದಿನವಹಿ ಸರಾಸರಿ 37 ರಿಂದ 39 ದಶ ಲಕ್ಷ ಯೂನಿಟ್‌ಗಳಷ್ಟು ವಿದ್ಯುತ್‌ನ್ನು ರಾಜ್ಯದಲ್ಲಿ ಉತ್ಪಾದಿಸಲಾಗುತ್ತಿದೆ

ಆ) ಪ್ರಸ್ತುತ ರಾಜ್ಯದ ದಿನವಹಿ ಅನಿರ್ಭಂದಿತ ವಿದ್ಯುತ್ ಬೇಡಿಕೆಯು ಸುಮಾರು 76 ದಶಲಕ್ಷ ಯೂನಿಟ್‌ಗಳಿಂದು ಅಂದಾಜು ಮಾಡಲಾಗಿದೆ.

ಇ) 50 ಮೆಗಾ ವ್ಯಾಟ್ ಸಾಮರ್ಥ್ಯದ ಕದ್ರಾ ಯೋಜನೆಯ 1997ರ ಎಪ್ರಿಲ್ ತಿಂಗಳ ಅಂತ್ಯದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದಲ್ಲದೆ ಕರ್ನಾಟಕ ವಿದ್ಯುತ್ ನಿಗಮವು 1458 ಮೆಗಾ ವ್ಯಾಟ್ ಸಾಮರ್ಥ್ಯದ 8 ಯೋಜನೆಗಳನ್ನು ಸ್ಥಾಪಿಸಲು ಉದ್ದೇಶಿಸಿದೆ ಹಾಗೂ ಖಾಸಗೀ ವಲಯದಲ್ಲಿ ಒಟ್ಟು 10160 ಮೆಗಾ ವ್ಯಾಟ್ ಸಾಮರ್ಥ್ಯದ ಯೋಜನೆಗಳನ್ನು ಸ್ಥಾಪಿಸಲು ಸರ್ಕಾರವು ಮಂಜೂರಾತಿ ನೀಡಿದೆ. ಈ ಎಲ್ಲಾ ಯೋಜನೆಗಳು ವಿವಿಧ ಅಭಿವೃದ್ಧಿ ಹಂತದಲ್ಲಿರುತ್ತದೆ.

ಈ) ಪ್ರಸ್ತುತ, ಮಂಡಳಿಯು ಮಹಾರಾಷ್ಟ್ರ ರಾಜ್ಯದಿಂದ ಪ್ರತಿದಿನ ಸುಮಾರು 1 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್‌ನ್ನು ಒಂದು ಯೂನಿಟ್‌ಗೆ ರೂ. 2.30ರ ದರದಲ್ಲಿ ಖರೀದಿಸುತ್ತಿದೆ.

ಉ) ರಾಜ್ಯದಲ್ಲಿ ವಿದ್ಯುತ್ ಕೊರತೆಯು ಪರಿಸ್ಥಿತಿಯು 2000 ಇಸವಿಯ ಕೊನೆಯವರೆವಿಗೂ ಮುಂದುವರೆಯುವುದೆಂದು ನಿರೀಕ್ಷಿಸಲಾಗಿದೆ.

**ಕರಾವಳಿ ಪ್ರದೇಶಗಳಲ್ಲಿ ಕಡಲ ಕೊರೆತ ತಪ್ಪಿಸಲು ತಡೆಗೋಡೆ ನಿರ್ಮಾಣ.**

638 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಎಷ್ಟು ಕಡೆ ಕಡಲ ಕೊರತೆಗಳು ಸಂಭವಿಸಿವೆ?*

*ಆ) ಕಡಲ ಕೊರತದಿಂದಾಗಿ ಮೀನುಗಾರರ ಕುಟುಂಬಗಳಿಗೆ ಹಾಗೂ ಮೀನುಗಾರಿಕೆಗೆ ತೊಂದರೆಯಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಇ) ಕಡಲ ಕೊರೆತ ತಪ್ಪಿಸಲು ತಡೆಗೋಡೆ ನಿರ್ಮಿಸಲು ಸರ್ಕಾರದ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಖರ್ಚು ಮಾಡಿದೆ? (ಜಿಲ್ಲಾವಾರು ವಿವರ ನೀಡುವುದು)*

*ಈ) ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಕೇಂದ್ರದಿಂದ ಎಷ್ಟು ಹಣ ಬಿಡುಗಡೆ ಆಗಿದೆ?*

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಕೆಳಕಂಡ 38 ಸ್ಥಳಗಳಲ್ಲಿ ಕಡಲ ಕೊರತೆಗಳು ಸಂಭವಿಸಿದೆ.

| ಕ್ರ.ಸಂ. | ತಾಲ್ಲೂಕು | ಸ್ಥಳಗಳು |
|---|---|---|
| 1. | ಕುಮಟಾ | ತದಡಿ, ಕಿರುಬೈಲ, ಗೋಕರ್ಣ. |
| 2. | ಅಂಕೋಲ | ಹಾರವಾಡ, ತರಂಗಿನಮಠ |
| 3. | ಕಾರವಾರ | ದಿವಾಕರ ಕಾಲೇಜ್ ಹತ್ತಿರ. |
| 4. | ಭಟ್ಕಳ | ಜಾಲಿ ತೆಂಗಿನಗುಂಡಿ, ಹೊನ್ನೆಗದ್ದೆ. |
| [illegible] | | [illegible] ಬ್ಯಾಂಕ್ |